## ಕರ್ನಾಟಕ ಸರ್ಕಾರ

ಸಂಖ್ಯೆ: ಎಎಲ್‌ಎನ್[ಎನ್][ವೈ]ಎಸ್‌ಆರ್/33/2017-18.

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 30-12-2017.

### -:: ಅಧಿಕೃತ ಜ್ಞಾಪನ ::-

ವಿಷಯ: ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಉಲ್ಲಾಳು ಗ್ರಾಮದ ಸ.ನಂ.158/2ರಲ್ಲಿ 1-18.09 ಎ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ ಬಿ.ವಿ.ಬಸವರಾಜು, ಶ್ರೀ ಬಿ.ವಿ.ಸಿದ್ಧಲಿಂಗಸ್ವಾಮಿ, ಶ್ರೀ ಬಿ.ವಿ.ಪ್ರಸಾದ್, ಶ್ರೀ ಬಿ.ವಿ.ನಾಗರಾಜ್ ಮತ್ತು ಶ್ರೀ ಬಿ.ವಿ.ಚಂದ್ರಶೇಖರ್ ಬಿನ್ ಲೇಟ್ ಬಿ.ಆರ್.ವೀರಪ್ಪ "ಬಸವ ನಿಲಯ", ಉಲ್ಲಾಳು ಉಪನಗರ, ಉಲ್ಲಾಳು ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ಇವರು ಸಲ್ಲಿಸಿರುವ ಅರ್ಜಿಯ ದಿನಾಂಕ: 12-09-2017.

ಉಲ್ಲೇಖ:
1] ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ:7:ಎಲ್‌ಜಿಪಿ:95 ದಿನಾಂಕ: 07-06-1999.
2] ಸರ್ಕಾರದ ಸುತ್ತೋಲೆ ಪತ್ರದ ಸಂ:ಆರ್‌ಡಿ:56:ಎಲ್‌ಜಿಪಿ:2008, ದಿನಾಂಕ: 10-9-2008 ಮತ್ತು 24-9-2008.
3] ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರ ವರದಿ ಸಂಖ್ಯೆ:ಎಎಲ್‌ಎನ್(ಎನ್)(ವೈ)ಎಸ್‌ಆರ್/37/2017-18, ದಿನಾಂಕ: 16-10-2017.
4] ಎಸ್.ಬಿ.ಐ. ಶಿವಾಜಿನಗರದ ಶಾಖೆಯ ಚಲನ್ ಸಂಖ್ಯೆ:26/301 ಹಾಗೂ ದಿನಾಂಕ: 27-12-2017.
5] ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ:ಬೆಂಅಪ್ರಾ/ನಯೋಜ/CON-769/776/2017-18, ದಿನಾಂಕ: 16-11-2017 ಮತ್ತು ಉಪ ಆಯುಕ್ತರು (ಭೂಸ್ವಾ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ:ಬೆಂಅಪ್ರಾ/ಉಆ(ಭೂಸ್ವಾ)/527/2017-18, ದಿನಾಂಕ: 07-11-2017.
6] ವಿಶೇಷ ಭೂಸ್ವಾಧೀನಾಧಿಕಾರಿ-2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ರವರ ಪತ್ರದ ಸಂಖ್ಯೆ: ಬೆಂಗಳೂರು/ವಿಭೂಅ-2/2470/2017-18, ದಿನಾಂಕ: 08-11-2017.
7] ವಿಶೇಷ ಭೂಸ್ವಾಧೀನಾಧಿಕಾರಿಗಳು, ಪೋಡಿಯಂ ಬ್ಲಾಕ್, ಬೆಂಗಳೂರು ರವರ ಪತ್ರ ಸಂಖ್ಯೆ: ಎಸ್‌ಎಲ್‌ಎಒ/ಎಎಲ್‌ಎನ್/1252/2017-18, ದಿನಾಂಕ: 13-11-2017.

******

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 95(2), 95(4) ಮತ್ತು 95(7) ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ಭೂ ಪರಿವರ್ತನಾ ಶುಲ್ಕ ಮತ್ತು ಇತರೆ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿ ಚಲನ್ ಹಾಜರುಪಡಿಸಲು ತಿಳುವಳಿಕೆ ಪತ್ರ ನೀಡಲಾಗಿರುವಂತೆ ಅರ್ಜಿದಾರರು ಎಸ್.ಬಿ.ಐ. ಶಿವಾಜಿನಗರದ ಶಾಖೆಯಲ್ಲಿ ದಿನಾಂಕ: 27-12-2017ರಂದು ಚಲನ್ ಸಂಖ್ಯೆ:26/301ರಲ್ಲಿ ಭೂ ಪರಿವರ್ತನಾ ಶುಲ್ಕ ರೂ.79,974/- ಹಾಗೂ 10,890 ಚ.ಅಡಿಗಳ ಅನಧಿಕೃತ ಕಟ್ಟಡಗಳಿಗೆ ದಂಡ ಶುಲ್ಕ ರೂ.1,25,235/- ಮತ್ತು ಪೋಡಿ ಶುಲ್ಕ ರೂ.55/-, ಒಟ್ಟು ರೂ.2,05,264/-ಗಳನ್ನು ಸರ್ಕಾರಕ್ಕೆ ಜಮಾ ಮಾಡಿ ಮೂಲ ಚಲನ್ ಹಾಜರುಪಡಿಸಿರುವಂತೆ ಅರ್ಜಿದಾರರಾದ ಶ್ರೀ ಬಿ.ವಿ. ಬಸವರಾಜು, ಶ್ರೀ ಬಿ.ವಿ.ಸಿದ್ಧಲಿಂಗಸ್ವಾಮಿ, ಶ್ರೀ ಬಿ.ವಿ.ಪ್ರಸಾದ್, ಶ್ರೀ ಬಿ.ವಿ.ನಾಗರಾಜ್ ಮತ್ತು ಶ್ರೀ ಬಿ.ವಿ.ಚಂದ್ರಶೇಖರ್ ಬಿನ್ ಲೇಟ್ ಬಿ.ಆರ್.ವೀರಪ್ಪ, "ಬಸವ ನಿಲಯ", ಉಲ್ಲಾಳು ಉಪನಗರ, ಉಲ್ಲಾಳು ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ರವರ ಅರ್ಜಿಯನ್ನು ಪರಿಗಣಿಸಿ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಉಲ್ಲಾಳು ಗ್ರಾಮದ ಸ.ನಂ.158/2ರಲ್ಲಿ 1-18.09 ಎ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1. ಈ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ ಬಿ.ಎಂ.ಆರ್.ಡಿ.ಎ. [ಸ್ಥಳೀಯ ಯೋಜನಾ ಪ್ರಾಧಿಕಾರ] ಬಿ.ಎಂ.ಐ.ಸಿ.ಪಿ.ಎ./ಮಾಲಿನ್ಯ ನಿಯಂತ್ರಣಾ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರರಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.
2. ಈ ಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.
3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಕಟ್ಟಡಗಳ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಎಂ.ಆರ್.ಡಿ.ಎ.[ಸ್ಥಳೀಯ ಯೋಜನಾ ಪ್ರಾಧಿಕಾರ] ಬಿ.ಎಂ.ಐ.ಸಿ.ಪಿ.ಎ./ಮಾಲಿನ್ಯ ನಿಯಂತ್ರಣಾ ಮಂಡಳಿ ರವರಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡತಕ್ಕದ್ದಲ್ಲ.

4. ಭೂ ಪರಿವರ್ತನೆ ಕೋರಿರುವ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳಿಗೆ ನಿಗದಿಪಡಿಸಲಾದ ಅಂದರೆ ರಸ್ತೆ ಜಾಗ, ರಸ್ತೆ ಮಾರ್ಜಿನ್, ಉದ್ಯಾನವನ, ದೇವಸ್ಥಾನ, ಸಿ.ಎ. ನಿವೇಶನ ಖಾಲಿ ಜಾಗ, ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ ಬಿ.ಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ/ ಬಿ.ಎಂ.ಐ.ಸಿ.ಎ.ಪಿ.ಎ) ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಸಕ್ಷಮ ಪ್ರಾಧಿಕಾರಗಳಿಗೆ ಪರಿತ್ಯಾಗ ಪತ್ರ [Relinquish Deed] ಮಾಡಿಕೊಡತಕ್ಕದ್ದು ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರ ವಿಧಿಸಿರುವ ಷರತ್ತುಗಳಿಗೊಳಪಟ್ಟಿರುತ್ತದೆ.

5. ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೆ ನಿವೇಶನಗಳನ್ನು/ಕಟ್ಟಡಗಳನ್ನು ಮಾರಾಟ ಮಾಡತಕ್ಕದ್ದಲ್ಲ. ಒಂದು ವೇಳೆ ಭೂ ಪರಿವರ್ತನೆ ಮಂಜೂರು ಮಾಡಿರುವ ಜಮೀನಿಗೆ ಮಾರಾಟ ನಿವೇಶನಗಳನ್ನು ಮಾಡಲು ಉದ್ದೇಶಿಸಿದಲ್ಲಿ ಈ ಆದೇಶ ಅನ್ವಯ ಬರುವುದಿಲ್ಲ.

6. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

7. ಈ ಜಮೀನಿಗೆ ಖಾತಾ ಫೂಟ್ ಖರಾಬ್ ಜಮೀನಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ67ರಂತೆ ಸರ್ಕಾರದ ಉದ್ದೇಶಕ್ಕೆ ಕಾಯ್ದಿರಿಸತಕ್ಕದ್ದು. ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸ.ನಂ.158/2ರಲ್ಲಿ 0-01 ಗುಂಟೆ ವಿಸ್ತೀರ್ಣ 'ಬಿ' ಖರಾಬಿನಲ್ಲಿ ಬರುವ ಜಾಗ ಇದನ್ನು ಸರ್ಕಾರಕ್ಕೆ ಕಾಯ್ದಿರಿಸತಕ್ಕದ್ದು. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ 'ಬಿ' ಖರಾಬು ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ಈ ಖರಾಬು ವಿಸ್ತೀರ್ಣವನ್ನು ಅರ್ಜಿದಾರರು ಯಾವುದಾದರೂ ಉದ್ದೇಶಕ್ಕೆ ಉಪಯೋಗಿಸಿಕೊಳ್ಳುವುದು ಕಂಡು ಬಂದಲ್ಲಿ ಈ ಭೂ ಪರಿವರ್ತನಾ ಆದೇಶವು ತನ್ನಿಂತಾನೇ ರದ್ದಾಗುತ್ತದೆ ಎಂದು ತಿಳಿಯತಕ್ಕದ್ದು.

8. ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ: 7556-665 ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ ಪಿ 1:7(11) 67, ದಿನಾಂಕ 1.1.1966 ರಂತೆ ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ, ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9. ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರಹೊಮ್ಮುವ ಹೊಗೆ, ಅನಿಲ, ಇತರೆ ತ್ಯಾಜ್ಯಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ / ಪರಿಸರ ಇಲಾಖೆಗೆ ಅನುಮತಿ ಹೊಂದಿರತಕ್ಕದ್ದು. ಹಾಗೂ ಸದರಿ ಜಮೀನು ಪೋಡಿ ದುರಸ್ತಿ ಪಡಿಸಿದ ನಂತರ ನಿವೇಶನಗಳನ್ನು ವಿಂಗಡಿಸತಕ್ಕದ್ದು.

10. ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ/ರಿಟ್ ಅರ್ಜಿ/ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

11. ಪ್ರಸ್ತಾವಿತ ಜಮೀನಿನ ಬಗ್ಗೆ ಯಾವುದೇ ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

12. ಪರಿಷ್ಕೃತ ಮಾಸ್ಟರ್ ಪ್ಲಾನ್ 2015ರಲ್ಲಿ ಸೂಕ್ಷ್ಮವಲಯ [Sensitive Zone] ದಲ್ಲಿ ಬರುವ ಪ್ರದೇಶಗಳಿಗೆ ಪೂರ್ವಾನುಮತಿ ಇಲ್ಲದೇ ಉದ್ದೇಶಿತ ಭಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯನ್ನು ಕೈಗೊಳ್ಳಬಾರದು.

13. ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಬೇಕಾದಲ್ಲಿ ಪ್ರಾಧಿಕಾರದಿಂದ ರಚಿತವಾದ ಉಪಸಮಿತಿಯ ನಿರ್ಣಯದಂತೆ ನಕ್ಷೆಗಳನ್ನು ಅನುಮೋದಿಸಿಕೊಳ್ಳತಕ್ಕದ್ದು.

14. ಪ್ರಶ್ನಿತ ಜಮೀನು ಸರ್ಕಾರಿ ಜಮೀನು ವ್ಯಾಪ್ತಿಗೆ ಒಳಪಟ್ಟಲ್ಲಿ, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 136 [3] ರ ಅಡಿ ವಿಚಾರಣೆ ನಡೆಸಿ ಹೊರಡಿಸುವ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

15. ಪ್ರಶ್ನಿತ ಜಮೀನು ಸರ್ಕಾರದಿಂದ ಮಂಜೂರಾದ ಯಾವುದೇ ಸರ್ಕಾರಿ ಜಮೀನಾಗಿದ್ದಲ್ಲಿ ಪಕ್ಕಾ ಪೋಡಿಯಾಗದ ಮತ್ತು ಪಕ್ಕಾ ಪೋಡಿ ಮಾಡಿಸಿಕೊಳ್ಳದೇ ತಪ್ಪು ಮಾಹಿತಿ ನೀಡಿ ಭೂ ಪರಿವರ್ತನೆ ಆದೇಶ ಪಡೆದಿದ್ದು ಕಂಡುಬಂದಲ್ಲಿ ಸದರಿ ಆದೇಶವನ್ನು ರದ್ದುಗೊಳಿಸಲಾಗುವುದು.

16. ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆ ಮಾಚಿ, ಅನಧಿಕೃತ ದಾಖಲೆಗಳ ಮೇಲೆ ಈ ಲೇಔಟ್ ಪಡೆದಿರುವುದು ಸಾಬೀತಾದಲ್ಲಿ ಯಾವುದೇ ತಿಳುವಳಿಕೆ ಇಲ್ಲದೆ ಈ ಅಧಿಕೃತ ಪ್ಲಾನಿನ ಮಂಜೂರಾತಿ ರದ್ದುಗೊಳ್ಳುತ್ತದೆ ಹಾಗೂ ಇದರಿಂದ ಅರ್ಜಿದಾರರಿಗಾಗಲೀ ಅಥವಾ ಅವರ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ನಷ್ಟಕ್ಕೆ ಸರ್ಕಾರವಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರರಾಗಿರುವುದಿಲ್ಲ. ಇದರ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.

- - - 3)

17. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.
18. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ದಿನಾಂಕ: 16-11-2017ರ ಪತ್ರದಲ್ಲಿನ ಷರತ್ತಿಗೊಳಪಟ್ಟಿರುತ್ತದೆ.
19. ಈ ಆದೇಶವು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಮೂಲ ಅರ್ಜಿ ಸಂ.222/2014 ದಿನಾಂಕ: 04-05-2016 ರಂತೆ ಹಾಗೂ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ಅ.ಸ ಪತ್ರ ಸಂಖ್ಯೆ: ನಅಇ/227/ಬೆಂಅಸೇ/2016, ದಿನಾಂಕ: 17-05-2016ರ ಆದೇಶದಂತೆ ಕೆರೆ, ಪ್ರೈಮರಿ, ಸೆಕೆಂಡರಿ ಟರ್ಷರಿ ಡ್ರೈನ್‌ಗಳ ಅಂಚಿನಿಂದ ಕ್ರಮವಾಗಿ 75 ಮೀ., 50ಮೀ., 35 ಮೀ., ಮತ್ತು 25 ಮೀ. ಬಫರ್ ಜಾಗವನ್ನು ಬಿಡುವ ಷರತ್ತಿಗೊಳಪಡಿಸಿದೆ.

: : **ಷೆಡ್ಯೂಲ್ ವಿವರ** : :

ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಉಲ್ಲಾಳು ಗ್ರಾಮದ ಸ.ನಂ.158/2ರಲ್ಲಿ 1-18.09 ಎ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿಗೆ ಚಕ್ಕುಬಂದಿ-

— **ಚಕ್ಕುಬಂದಿ** —

| | |
|---|---|
| ಪೂರ್ವಕ್ಕೆ: | ಸ.ನಂ.156ರ ಜಮೀನು ಮತ್ತು ರಸ್ತೆ ಹಾಗೂ ಸ.ನಂ.158/2ರ ಉಳಿಕೆ ಜಮೀನು. |
| ಪಶ್ಚಿಮಕ್ಕೆ: | ಸ.ನಂ.157ರ ಜಮೀನು. |
| ಉತ್ತರಕ್ಕೆ: | ಸ.ನಂ.158/1ರ ಜಮೀನು. |
| ದಕ್ಷಿಣಕ್ಕೆ: | ಸ.ನಂ.159ರ ಜಮೀನು. |

ಸಹಿ/-
[ ವಿ.ಶಂಕರ್ ]
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

**ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:-**

1) ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ರವರಿಗೆ ಮೂಲ ಕಡತ ಹಾಗೂ ಚಲನ್ ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಗಣಕೀಕೃತ ಆರ್.ಟಿ.ಸಿ.ಯಲ್ಲಿ ಕೂಡಲೇ ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
2) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಎಂ.ಆರ್.ಡಿ.ಎ [ಸ್ಥಳೀಯ ಯೋಜನಾ ಪ್ರಾಧಿಕಾರ] ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ, ಬೆಂಗಳೂರು.
4) ಉಪ ನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪ ವಿಭಾಗ, ಬೆಂಗಳೂರು ಇವರಿಗೆ ಆರ್.ಟಿ.ಸಿ. ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ, ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರ್ಣಗೊಳಿಸಲು ಸೂಚಿಸಿದೆ.
5) ಉಪ ನೋಂದಣಾಧಿಕಾರಿಗಳು, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಇವರಿಗೆ ಮಾಹಿತಿಗಾಗಿ.
6) ಅರ್ಜಿದಾರರಾದ ಶ್ರೀ ಬಿ.ವಿ.ಬಸವರಾಜು, ಶ್ರೀ ಬಿ.ವಿ.ಸಿದ್ದಲಿಂಗಸ್ವಾಮಿ, ಶ್ರೀ ಬಿ.ವಿ.ಪ್ರಸಾದ್, ಶ್ರೀ ಬಿ.ವಿ.ನಾಗರಾಜ್ ಮತ್ತು ಶ್ರೀ ಬಿ.ವಿ.ಚಂದ್ರಶೇಖರ್ ಬಿನ್ ಲೇಟ್ ಬಿ.ಆರ್.ವೀರಪ್ಪ, "ಬಸವ ನಿಲಯ", ಉಲ್ಲಾಳು ಉಪನಗರ, ಉಲ್ಲಾಳು ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ರವರಿಗೆ ಧೃಢೀಕೃತ ಅಂಚೆ ಮೂಲಕ.
7) ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

# ಕರ್ನಾಟಕ ಸರ್ಕಾರ

ಸಂಖ್ಯೆ: ಎಎಲ್‌ಎನ್[ಎನ್][ವೈ]ಎಸ್‌ಆರ್/33/2017-18.

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 26-12-2017.

## : : ತಿಳುವಳಿಕೆ : :

**ವಿಷಯ:** ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಉಲ್ಲಾಳು ಗ್ರಾಮದ ಸ.ನಂ.158/2ರಲ್ಲಿ 1-18.09 ಎ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿರುವ ಬಗ್ಗೆ

**ಉಲ್ಲೇಖ:**
1] ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ:7:ಎಲ್‌ಜಿಪಿ:95 ದಿನಾಂಕ:07-06-1999.
2] ಸರ್ಕಾರದ ಸುತ್ತೋಲೆ ಪತ್ರದ ಸಂಖ್ಯೆ: ಆರ್.ಡಿ:56:ಎಲ್‌ಜಿಪಿ:2008 ದಿನಾಂಕ: 10-09-2008 ಮತ್ತು 24-9-2008.
3] ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರ ಪತ್ರ ಸಂಖ್ಯೆ: ಎಎಲ್‌ಎನ್(ಎನ್)(ವೈ)ಎಸ್‌ಆರ್/37/2017-18, ದಿನಾಂಕ: 16-10-2017.
4] ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರದ ಸಂಖ್ಯೆ: ಬೆಂಅಪ್ರಾ/ನಯೋಇ/CON-769/776/2017-18, ದಿನಾಂಕ: 16-11-2017 ಮತ್ತು ಉಪ ಆಯುಕ್ತರು (ಭೂ.ಸ್ವಾ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರದ ಸಂಖ್ಯೆ: ಬೆಂಅಪ್ರಾ/ಉಆ(ಭೂಸ್ವಾ)/527/2017-18, ದಿನಾಂಕ: 07-11-2017.
5] ವಿಶೇಷ ಭೂಸ್ವಾಧೀನಾಧಿಕಾರಿ-2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ರವರ ಪತ್ರದ ಸಂಖ್ಯೆ: ಬೆಂಗಳೂರು/ವಿಭೂಸ್ವಾಅ-2/2470/2017-18, ದಿನಾಂಕ: 08-11-2017.
6] ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೋರಿಡಿಯಂ ಬ್ಲಾಕ್, ಬೆಂಗಳೂರು ರವರ ಪತ್ರ ಸಂಖ್ಯೆ:ಎಸ್‌ಎಲ್‌ಎಒ/ಎಎಲ್‌ಎನ್/1232/2017-18, ದಿನಾಂಕ: 13-11-2017.

******

1. ನೀವು ಉಲ್ಲಾಳು ಗ್ರಾಮದ ಸ.ನಂ.158/2ರಲ್ಲಿ 1-18.09 ಎ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಿರುತ್ತದೆ ಹಾಗೂ ಈ ಬಾಬ್ತು ಈ ಕೆಳಗೆ ನಮೂದಿಸಿರುವ ಭೂ ಪರಿವರ್ತನಾ ಶುಲ್ಕ ಮತ್ತು ಪೋಡಿ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿ ಈ ತಿಳುವಳಿಕೆ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ರೂ.100-00 (ಒಂದು ನೂರು ರೂಪಾಯಿಗಳು ಮಾತ್ರ) ಛಾಪಾ ಕಾಗದದಲ್ಲಿ ಕರಾರು ಪತ್ರದೊಂದಿಗೆ ಚಲನ್ / ಡಿ.ಡಿ.ಯನ್ನು 15 ದಿವಸಗಳೊಳಗಾಗಿ ಹಾಜರುಪಡಿಸುವುದು.
2. ನಿಗದಿಪಡಿಸಿದ ಅವಧಿಯಲ್ಲಿ ಭೂ ಪರಿವರ್ತನೆ ಶುಲ್ಕ ಪಾವತಿಸಿದ ಬಗ್ಗೆ ಚಲನ್ ಡಿ.ಡಿ.ಮತ್ತು ಕರಾರು ಪತ್ರ ಅನುಮೋದನೆ ಪತ್ರ, ಹಾಜರುಪಡಿಸದಿದ್ದಲ್ಲಿ ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗುವುದು.
3. ಪೋಡಿ ಆಗದಿರುವ ಪ್ರಕರಣಗಳಲ್ಲಿ, ಭೂ ಪರಿವರ್ತನೆ ಆದೇಶವನ್ನು ಪಡೆಯುವುದರೊಳಗೆ ಸದರಿ ಜಮೀನನ್ನು ಕಡ್ಡಾಯವಾಗಿ ಪೋಡಿ ಮಾಡಿಸಿ ದುರಸ್ತು ಆಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸತಕ್ಕದ್ದು.
4. ಸದರಿ ಜಮೀನಿನಲ್ಲಿ ರಸ್ತೆಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಹೊರತುಪಡಿಸಿ ಬಡಾವಣೆ ನಕ್ಷೆಯನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳತಕ್ಕದ್ದು.

- - - 2)

5. ಪ್ರಶ್ನಿತ ಜಮೀನಿನಲ್ಲಿ ಅನಧಿಕೃತವಾಗಿ ಹಂಚಿರುವ ನಿವೇಶನಗಳ ಬದಲಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅನುಮೋದಿಸಿದ ನಕ್ಷೆಯಂತೆಯೇ ಬಡಾವಣೆಯನ್ನು ನಿರ್ಮಿಸತಕ್ಕದ್ದು.
6. ಪ್ರಶ್ನಿತ ಜಮೀನಿನ ಬಗ್ಗೆ ಉದ್ಭವಿಸುವ ತಕರಾರುಗಳಿಗೆ ಮತ್ತು ಯಾವುದೇ ನ್ಯಾಯಾಲಯದಲ್ಲಿ ನೀಡುವ/ನೀಡಿರುವ ತೀರ್ಪಿಗೆ ಒಳಪಟ್ಟಿರುತ್ತದೆ. ತಪ್ಪು ಮಾಹಿತಿ ದಾಖಲೆ ನೀಡಿ ಭೂ ಪರಿವರ್ತನೆ ಬಗ್ಗೆ ಅರ್ಜಿ ಸಲ್ಲಿಸಿದಲ್ಲಿ ಯಾವುದೇ ತಿಳುವಳಿಕೆ ನೀಡದೆ ರದ್ದುಗೊಳಿಸಲಾಗುವುದು.

| ಸರ್ವೆ. ನಂಬರ್ | ವಿಸ್ತೀರ್ಣ ಎ/ಗುಂ | ಹಣ ಪಾವತಿ ವಿವರ | ಮೊಬಲಗು ರೂ.ಪೈ. |
|---|---|---|---|
| 158/2 | 1-18.09 | 1) ಭೂ ಪರಿವರ್ತನಾ ಶುಲ್ಕ ಎಕರೆ ಒಂದಕ್ಕೆ ರೂ.54,430-00ರಂತೆ | 79,974-00 |
| | | 2) 10,890 ಚ.ಅಡಿಗಳ ಅನಧಿಕೃತ ಕಟ್ಟಡಗಳಿಗೆ ದಂಡ ಶುಲ್ಕ ರೂ.11.50-00ರಂತೆ | 1,25,235-00 |
| | | 3) ಪೋಡಿ ಶುಲ್ಕ ರೂ.55-00 | 55-00 |
| | | ಒಟ್ಟು | 2,05,264-00 |

(ರೂಪಾಯಿಗಳು ಅಕ್ಷರಗಳಲ್ಲಿ:- ಎರಡು ಲಕ್ಷದ ಐದು ಸಾವಿರದ ಎರಡು ನೂರಾ ಅರವತ್ನಾಲ್ಕು ರೂ. ಮಾತ್ರ)

ಜಿಲ್ಲಾಧಿಕಾರಿಗಳ ಪರವಾಗಿ,
ಬೆಂಗಳೂರು ಜಿಲ್ಲೆ, ಬೆಂಗಳೂರು.


ಗೆ,

ಶ್ರೀ ಬಿ.ವಿ.ಬಸವರಾಜು, ಶ್ರೀ ಬಿ.ವಿ.ಸಿದ್ದಲಿಂಗಸ್ವಾಮಿ,
ಶ್ರೀ ಬಿ.ವಿ.ಪ್ರಸಾದ್, ಶ್ರೀ ಬಿ.ವಿ.ನಾಗರಾಜ್ ಮತ್ತು
ಶ್ರೀ ಬಿ.ವಿ.ಚಂದ್ರಶೇಖರ್ ಬಿನ್ ಲೇಟ್ ಬಿ.ಆರ್.ವೀರಪ್ಪ,
ಬಸವ ನಿಲಯ, ಉಲ್ಲಾಳು ಉಪನಗರ,
ಉಲ್ಲಾಳು ಗ್ರಾಮ, ಯಶವಂತಪುರ ಹೋಬಳಿ,
ಬೆಂಗಳೂರು ಉತ್ತರ ತಾಲ್ಲೂಕು.

(36)

ಗ್ರಾಮ:- ಉಲ್ಲಾಳು | ಹೋ॥ ಯಶವಂತಪುರ | ತಾ॥ ಬೆಂಗಳೂರು ಉತ್ತರ

ಸ॥ನಂ॥ 158/2 ರ ವಾಸದ ಉದ್ದೇಶಕ್ಕೆ ಭೂಪರಿವರ್ತನೆಯ ಬಾಬ್ತು ನಕ್ಷೆ




ಚಕ್ಕುಬಂದಿ

ಪೂರ್ವ :- ಸ.ನಂ.156 [illegible]

ಪಶ್ಚಿಮ :- ಸ.ನಂ.157

ಉತ್ತರ :- ಸ.ನಂ.158/1

ದಕ್ಷಿಣ :- ಸ.ನಂ.159

| ಕ್ರಮ ಸಂಖ್ಯೆ | ಸರ್ವೆ ನಂಬರ್ | ಒಟ್ಟು ವಿಸ್ತೀರ್ಣ | ಆಕಾರ ಬಂದಿನಂತೆ ಖರಾಬು | | | ಅರ್ಜಿದಾರರಿಗೆ ಹಕ್ಕು ಇರುವ ವಿಸ್ತೀರ್ಣ | ಭೂಪರಿವರ್ತನೆ ಕೋರಿರುವ ವಿಸ್ತೀರ್ಣ | ಭೂಪರಿವರ್ತನೆ ಪ್ರದೇಶದಲ್ಲಿನ ಖರಾಬು | | | |
|---|---|---|---|---|---|---|---|---|---|---|---|
| | | | ಖ'ಎ | ಖ'ಬಿ | ಖ'ಸಿ | | | ಖ'ಎ | ಖ'ಬಿ | ಖ'ಸಿ | ಷರಾ |
| 1 | 158/2 | 1-31 | — | 0-1 | 0-01 | 1-18½ | 1-18½ | – | – | – | |

1 [ ] ಈ ಬಣ್ಣದಿಂದ ಗುರುತಿಸಿರುವ ಪ್ರದೇಶವು 1-18½ ಇದ್ದು [illegible] ರವರು ವಾಸದ/ವಾಣಿಜ್ಯ ಉದ್ದೇಶಕ್ಕೆ ಭೂಪರಿವರ್ತನೆ ಕೋರಿರುತ್ತಾರೆ.

2 ಭೂಪರಿವರ್ತನೆ ಕೋರಿರುವ ಪ್ರದೇಶದಲ್ಲಿ 0-10 [illegible]

3 ಈ ಬಣ್ಣದಿಂದ ಗುರುತಿಸಿರುವುದು ಸಂಪರ್ಕ ರಸ್ತೆಯಾಗಿರುತ್ತದೆ.

4 ಈ ನಕ್ಷೆಯನ್ನು ಎ.ಎಲ್.ಎನ್.ಎಸ್.ಆರ್ 35/[illegible]/18 ರ ಮೇರೆಗೆ ತಯಾರಿಸಿದೆ.

"ದೃಢೀಕರಿಸಿದೆ"

ತಹಶೀಲ್ದಾರ್
ಬೆಂಗಳೂರು ಉತ್ತರ ತಾಲ್ಲೂಕು

[illegible]
ಬೆಂಗಳೂರು [illegible] ತಾಲ್ಲೂಕು

Scanned by CamScanner